6.	ಚಿತ್ತಾಪೂರ	302.10	.71
7.	ಸೇಡಂ	218.07	.98
8.	ಜೇವರ್ಗಿ	153.15	.09
9.	ಗುರಮಿಟಕಾಲ	199.68	.04
10.	ಯಾದಗೀರ	206.48	.70
11.	ಶಹಾಪೂರ	152.41	.27
12.	ಶೋರಾಪೂರ	190.74	.81
	ಒಟ್ಟು	2577.09	.20

ಗುಲ್ಬರ್ಗಾ ಜಿಲ್ಲೆಯ ಸಂಚಾರ ಅನುಕೂಲಕ್ಕಾಗಿ ರಾಷ್ಟ್ರೀಕರಣ ಮೂ ಖಾಸಗೀ ವ್ಯವಸ್ಥೆ ಅನುಕೂಲ ಮಾಡಿಕೊಡುವುದು

650 - ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಲ್ಬರ್ಗಾ ಜಿಲ್ಲೆಯಲ್ಲಿ ನಾಗರೀಕರ ಸಂಚಾರದ ಅನುಕೂಲಕ್ಕಾಗಿ ರಾಷ್ಟ್ರೀಕರಣವಾಗಿ ಸಹ ಜನಸಂಚಾರಕ್ಕೆ ಅನಾನುಕೂಲತೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;*

ಆ) *ಈ ರಾಷ್ಟ್ರೀಕರಣಕ್ಕೆ ಬದಲು ಮೊದಲು ಖಾಸಗೀ ವಾಹನಗಳಲ್ಲಿ ಪ್ರಯಾಣಿಕರಿಗೆ ವೇಳೆಯಲ್ಲಿ ವಾಹನಗಳು ಸಂಚರಿಸಿ ಪ್ರತಿ ಗ್ರಾಮಕ್ಕೆ ಹೋಗುವುದರಿಂದ ಅನುಕೂಲತೆಗಳು ಇದ್ದಿಲ್ಲವೆ,*

ಇ) *ರಾಷ್ಟ್ರೀಕರಣ ಇದ್ದರೂ ಸಹ ಖಾಸಗೀಯವರಿಗೆ ಪರವಾನಿಗೆ ನೀಡಿ ಈ ಎರಡು ವ್ಯವಸ್ಥೆಗಳಿಂದ ನಾಗರೀಕರ ಸಂಚಾರಕ್ಕೆ ಅನುಕೂಲ ಮಾಡಿ ಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?*

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಇಲ್ಲ.

ಆ) ಸಾರಿಗೆ ಸೇವೆಯನ್ನು ಅತ್ಯುತ್ತಮವಾಗಿ ನಿರ್ವಹಿಸಲು ಸಾಕಷ್ಟು ಸೇವೆಯನ್ನು ನೀಡುವ ಸಲುವಾಗಿ ಮಾರ್ಗಗಳನ್ನು ರಾಷ್ಟ್ರೀಕರಣ ಮಾಡಲಾಗಿದೆ.

ಇ) ಸರ್ಕಾರವು ಹೊಸ ಸಾರಿಗೆ ನೀತಿಯನ್ನು ರೂಪಿಸುವ ಬಗ್ಗೆ ತೀವ್ರವಾಗಿ ಪರಿಶೀಲಿಸುತ್ತಿದ್ದು ಕೆಲವು ರಾಷ್ಟ್ರೀಕೃತ ಮಾರ್ಗಗಳನ್ನು ಖಾಸಗೀಕರಣಗೊಳಿಸುವ ಪ್ರಸ್ತಾವನೆಯೂ ಇರುತ್ತದೆ.

ಅಧ್ಯಕ್ಷರು : ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಪ್ರಕಟಣೆ

ಅಧ್ಯಕ್ಷರು : ಈಗ ಪ್ರಕಟಣೆ

1994-95ನೇ ಸಾಲಿನ ಪೂರಕ ಅಂದಾಜುಗಳ ಪ್ರಥಮ ಕಂತನ್ನು ವಿಧಾನಸಭೆಯಲ್ಲಿ ಮಂಡಿಸಲು ಸಂವಿಧಾನದ 205(1)ನೇ ಅನುಚ್ಛೇದದ ಪ್ರಕಾರ ಮಾನ್ಯ ರಾಜ್ಯಪಾಲರಿಂದ ಶಿಫಾರಸ್ಸು ಬಂದಿರುತ್ತದೆ.

ಶ್ರೀ ಎಂ.ವಿ. ವೀರಪ್ಪ ಮೊಯಿಲಿ : ಅಧ್ಯಕ್ಷರೇ, 1992-93ನೇ ಸಾಲಿನ ಧನ ವಿನಿಯೋಗ ಸಾಲಿನ ಲೆಕ್ಕಪತ್ರಗಳು, 92-93 ಸಾಲಿನ ಹಣಕಾಸು ಲೆಕ್ಕಪತ್ರಗಳು, 93ನೇ ಇಸವಿ ಮಾರ್ಚಿ 31ಕ್ಕೆ ಕೊನೆಗೊಂಡಂತೆ ವಾರ್ಷಿಕ ನಿಯಂತ್ರಕ ಮತ್ತು ಮಹಾಲೇಖಪರೀಕ್ಷಕರ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಕೈಗಾ ನ್ಯೂಕ್ಲಿಯರ್ ಪ್ಲಾಂಟ್‌ನ ಡೋಮ್ ಬಿದ್ದು ಹೋಗಿರುವ ಬಗ್ಗೆ

+ ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು) : ನಮ್ಮ ರಾಜ್ಯದ ಉತ್ತರಕನ್ನಡ ಜಿಲ್ಲೆಯಲ್ಲಿ ಕೈಗಾ ನ್ಯೂಕ್ಲಿಯರ್ ಪ್ಲಾಂಟ್ ಬರುತ್ತಿದೆ. ಮುಖ್ಯಮಂತ್ರಿಗಳು ಸ್ವಲ್ಪ ಗಮನಕೊಡಬೇಕು. 13-5-1994ಕ್ಕೆ ಈ ಕೈಗಾ ಪ್ಲಾಂಟಿನ ಒಳಗಿನ ಡೂಂ ಕೊಲಾಪ್ಸ್ ಆಯಿತು; ಆದ್ದರಿಂದ ಉತ್ತರ ಕನ್ನಡ ಜಿಲ್ಲೆಯಲ್ಲಷ್ಟೇ ಅಲ್ಲ ಇಡೀ ರಾಜ್ಯದಲ್ಲಿ ಹಾಗೂ ದೇಶದಲ್ಲಿ ಇದರ ಬಗ್ಗೆ ಒಂದು ಭಯದ ವಾತಾವರಣ ನಿರ್ಮಾಣವಾಗಿದೆ. ಈ ನ್ಯೂಕ್ಲಿಯರ್ ಪವರ್ ಪ್ರಾಜೆಕ್ಟ್ ಸೇಫ್ಟಿ ಬಗ್ಗೆ ಜನರಲ್ಲಿ ಭಯದ ವಾತಾವರಣ ನಿರ್ಮಾಣವಾಗಿ ಪುನಃ ಜನರಲ್ಲಿ ಇದಕ್ಕೆ ವಿರೋಧ ಪ್ರಾರಂಭವಾಗಿದೆ. ನಾನು ಸ್ವತಃ ಈ ಪ್ರಾಜೆಕ್ಟ್‌ಗೆ ಭೇಟಿ ಕೊಟ್ಟಿದ್ದೇನೆ. ಇದರ ಬಗ್ಗೆ ಮುಖ್ಯಮಂತ್ರಿಗಳಿಗೆ ನಾನು ಪತ್ರ ಬರೆದಿದ್ದೆ. ಪ್ರಧಾನಿಗಳಿಗೂ ಪತ್ರ ಬರೆದಿದ್ದೆ ಮತ್ತು ನ್ಯೂಕ್ಲಿಯರ್ ಅಟಾಮಿಕ್ ಎನರ್ಜಿ ರೆಗ್ಯುಲೇಷನ್ ಬೋರ್ಡಿನ ಅಧ್ಯಕ್ಷರಿಗೆ ಪತ್ರ ಬರೆದಿದ್ದೆ ಮತ್ತು ನ್ಯೂಕ್ಲಿಯರ್ ಪವರ್ ಪ್ರಾಜೆಕ್ಟಿನ ಚೇರ್ಮನರಿಗೂ ಪತ್ರ ಬರೆದಿದ್ದೆ. ಮಾನ್ಯ ಪ್ರಧಾನಿ ಸಹ ಇದರ ಬಗ್ಗೆ ನನಗೆ ಉತ್ತರ ಕೊಟ್ಟಿದ್ದಾರೆ. "I have received your letter on 20th June 94 regarding Kaiga Nuclear power project and I have noted your concern."

ಹಾಗಾಗಿ ಪ್ರಧಾನಿ ಮಟ್ಟದಲ್ಲಿ ಸಹ ಇದರ ಬಗ್ಗೆ ವಿಚಾರ ನಡೆದಿದೆ. ಮುಖ್ಯಮಂತ್ರಿಗಳು ಸಹ ಇದರ ಬಗ್ಗೆ ವಿಚಾರವಿನಿಮಯ ಮಾಡಿರಬಹುದು. ಗೋಪಾಲಕೃಷ್ಣ ಎಂದು ಅಟಾಮಿಕ್ ಎನರ್ಜಿ ರೆಗ್ಯುಲೇಷನ್ ಬೋರ್ಡಿನ ಅಧ್ಯಕ್ಷರು ತಮ್ಮ ಉತ್ತರದಲ್ಲಿ ಸ್ಪಷ್ಟವಾಗಿ ಒಪ್ಪಿಕೊಂಡಿದ್ದಾರೆ. "It is true that there have been some deviations at site from the designs which were presented to the DERB at the time of review. But whether or not and to what extent these deviations may be responsible for the dome failure is a matter which will be clear only when the investigating committees which are looking into these questions complete their evaluations.

ಈಗಾಗಲೇ ಎರಡು ಕಮಿಟಿಗಳ ರಚನೆ ಆಗಿದೆ. ಒಂದು ರೆಗ್ಯುಲೇಟೆಡ್ ಬೋರ್ಡ್‌ನವರು ಮಾಡಿದ್ದಾರೆ. ಇನ್ನೊಂದು ನ್ಯೂಕ್ಲಿಯರ್ ಪವರ್ ಪ್ರಾಜೆಕ್ಟ್‌ನವರು ಮಾಡಿದ್ದಾರೆ. ಆ ಎರಡೂ ಸಮಿತಿಗಳ ವರದಿ ಇನ್ನೂ ಬಂದಿಲ್ಲ; ಜೂನ್, ಜುಲೈ, ಆಗಸ್ಟ್, ಮೂರೂವರೆ ತಿಂಗಳಾಯಿತು. ಹಾಗಾಗಿ ನಾನು ಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇನೆ. ತಮ್ಮ ಕಡೆಯಿಂದ, ಜನರ ಮನಸ್ಸಿನಲ್ಲಿ ಒಂದು ಭಯ ನಿರ್ಮಾಣವಾಗಿದೆ. ಆ ಭಯ ನಿರ್ಮೂಲನೆ ಮಾಡುವುದಕ್ಕೆ ತಾವೇನು ಮಾಡಿದ್ದೀರಿ? ನಾನು ಕೆಲವು ಸಲಹೆಗಳನ್ನು ಕೊಟ್ಟಿದ್ದೆ. ಈ ಎರಡೂ ಕಮಿಟಿಗಳ ರಿಪೋರ್ಟ್ ತಕ್ಷಣ ಪಬ್ಲಿಷ್ ಆಗಬೇಕು. ಲೋಕಲ್ ಭಾಷೆಗಳಲ್ಲಿ ಪ್ರಕಟವಾಗಬೇಕು. ಅಲ್ಲೇನಾಗಿದೆ ಎಂದರೆ ಸಾಮಾನ್ಯ ಜನರಿಗೆ ಇವತ್ತು ಪ್ರಾಜೆಕ್ಟ್ ನೋಡುವುದಕ್ಕೆ ಬಿಡುವುದಿಲ್ಲ, ಅದರಿಂದ ಜನರಲ್ಲಿ ಒಂದು ಸಂಶಯ ಭಯ ನಿರ್ಮಾಣವಾಗಿದೆ, ಏಕೆ ಇವರು ಬಿಡುವುದಿಲ್ಲ, ಪತ್ರಿಕಾ ವರದಿಗಾರರಿಗೆ ಬಿಡುವುದಿಲ್ಲ, ಏನು ಭಯ ಇದೆ, ಇದು ನನಗೆ ಗೊತ್ತಾಗಬೇಕು.